ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೨೦ನೇ ಜೂನ್ ೧೯೯೦, ಜ್ಯೇಷ್ಠ ೩೦, ೧೯೧೨ ಶತ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು.—ಸದನದ ಒಟ್ಟಾರೆ ಅಭಿಪ್ರಾಯವನ್ನು ನಿನ್ನೆ ತೆಗೆದುಕೊಂಡು ಇವತ್ತು ಸದನ ಬೆಳಿಗ್ಗೆ ೯ ಗಂಟೆಗೆ ಸೇರುವುದೆಂದು ನಿಶ್ಚಯಿಸಲಾಗಿದೆ. ನಾನು ೯ ಗಂಟೆಗೆ ಬಂದೆ ಸಂಪಾರರು ೧೬ ನಿಮಿಷ ಸದನದ ಗಂಟೆ ಹೊಡೆಯಬೇಕಾಗಿ ಬಂತು. ವಿಧಾನಸಭಾ ಭವನದ ಹತ್ತಿರ ಗಂಟೆ ಹೊಡೆಯುವುದಲ್ಲದೆ ಎಲ್. ಎಚ್.ನ ಹತ್ತಿರ ಕೂಡ ಒಂದು ಗಂಟೆಯನ್ನು ಹಾಕಿಸಿ ಎಂದು ಒಬ್ಬರು ನನಗೆ ಸಜೆಷನ್ ಕೊಟ್ಟರು. ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕೆಂಬ ಕಾತುರತೆ ಚರ್ಚೆ ಸಮಯದಲ್ಲಿ ಕಾಣುತ್ತದೆ ಆದರೆ ಸದನ ಪ್ರಾರಂಭವಾಗುವಾಗ ಸದನ ಮುಂಗಿಯುವಾಗ ಯಾವ ತರಹ ಸದನವ ನಡವಳಿಕೆಗಳ ಬಗ್ಗೆ ಆಸಕ್ತಿ ವಹಿಸತಕ್ಕಂಥಾದ್ದು ಮತ್ತು ನಮಗೆ ನಾವೇ ಅದನ್ನು ದಕ್ಕಿಸಿಕೊಳ್ಳ ಬೇಕಾಗಿರತಕ್ಕಂತಹ ಜಪಾಬ್ದಾರಿ ಇದೆ. ಇದನ್ನು ನಮ್ರತೆಯಿಂದ ಸೂಚನೆ ಮಾಡಲು ಇಚ್ಛೆಪಡುತ್ತೇನೆ

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ

(ಶಿಕ್ಷಣ ಯುವಜನ ಸೇವಾ ಮತ್ತು ಕನ್ನಡ ಸಂಸ್ಕೃತಿ ಇಲಾಖೆ)

ಶ್ರೀ ಪಿ. ಎಸ್. ರಾಣೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಮಂಡಿಸಿರುವಂತಹ ಶಿಕ್ಷಣ ಇಲಾಖೆಯ ಮತ್ತು ಯುವಜನ ಸೇವಾ ಇಲಾಖೆಯ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಪ್ರಪಂಚದಲ್ಲಿಯೇ ಅತಿ ದೊಡ್ಡದಾದಂತಹ ಪ್ರಜಾಪ್ರಭುತ್ವದ ರಾಷ್ಟ್ರವಾದ ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ ೩೭ರಷ್ಟು ಮಾತ್ರ. ಅಂದರೆ ಸುಮಾರು ೪೦ ರಿಂದ ೪೫ ಕೋಟಿ ಜನರು ಇವತ್ತು ನಿರಕ್ಷರಸ್ಥರಾಗಿದ್ದಾರೆ. ಈ ಸಂಖ್ಯೆ ಆಮೆರಿಕ ಮತ್ತು ಸೋವಿಯತ್ ರಾಷ್ಟ್ರದ ಜನಸಂಖ್ಯೆಗಿಂತಲೂ ಹೆಚ್ಚಾಗಿದೆ ಎನ್ನುವುದನ್ನು ತಿಳಿದುಕೊಂಡರೆ ನಾವು ನಿಜವಾಗಿಯೂ ೪೦ ದಶಕಗಳ ಹಿಂದಿನ ಸ್ಥಿತಿಗೆ ತಲುಪುತ್ತಿದ್ದೇವೆಂದು ಅನ್ನಿಸುತ್ತದೆ. ರಾಷ್ಟ್ರದಲ್ಲಿ ಹೆಚ್ಚು ಅಸಕ್ಷರಸ್ಥರು ಇದ್ದರೆ ಪ್ರಜಾಪ್ರಭುತ್ವದ ಆಚರಣೆ ಅಸಾಧ್ಯವಾಗುತ್ತದೆ ಅಷ್ಟೇ ಅಲ್ಲ ಅದು ಅರ್ಥ ಹೀನವಾಗುತ್ತದೆ. ಇವತ್ತು ನಿರಕ್ಷರಿಗಳ ಸಂಖ್ಯಾಬಲದಿಂದ ಈ ಭಾರತ ದೇಶವನ್ನು ನಿರಕ್ಷರಿಗಳ ಒಂದು ದೊಡ್ಡ ದೇಶ ಎಂದು ಹೇಳಬೇಕಾಗಿದೆ. ಈ ನಿರಕ್ಷರಿಗಳನ್ನು ಬಿಟ್ಟು ಸಾಕ್ಷರಿಗಳ ದೊಡ್ಡ ದೇಶವೆಂದು ಹೇಳುವುದು ಹೆಚ್ಚಳಿಕೆ ಏನೂ ಅಲ್ಲ. ಇದೊಂದು ದುರ್ದೈವದ ಸಂಗತಿ ಮತ್ತು ಒಂದು ದುರಂತ ಸಾಕ್ಷರತೆಯಲ್ಲಿ ನಮ್ಮ ಭಾರತ ಎಲ್ಲಾ ರೀತಿಯಲ್ಲೂ ಹಿಂದುಳಿದಿದೆ ಎಂದು ಹೇಳ ಬೇಕಾಗಿದೆ. ಈ ನಿರಕ್ಷರತೆಯನ್ನು ಹೋಗಲಾಡಿಸಲು, ಸ್ವಾಭಿಮಾನ ಮೂಡಿಸುವಂಥ ಯಾವ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕೆಂದು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ನಮ್ಮ ಹಿರಿಯರು ಗಳಿಸಿಕೊಟ್ಟಂಥ ಸ್ವತಂತ್ರ ಭಾರತದಲ್ಲಿ ಸುಮಾರು ೪೦-೪೫ ಕೋಟಿ ನಿರಕ್ಷರಿಗಳಿದ್ದಾರೆ ಏಕೆಂದರೆ ನಾವು ಈ ಮುಗ್ಧ ಪ್ರಜೆಗಳ ಅಜ್ಞಾನತೆಯನ್ನು ಪೋಷಿಸಿಕೊಂಡು ಬರುತ್ತಿದ್ದೇವೆ. ಈ ಪ್ರಜೆಗಳನ್ನು ನಮ್ಮ ರಾಷ್ಟ್ರದಲ್ಲಿರತಕ್ಕ ವಿಚ್ಛಿದ್ರಕಾರಕ ಮತ್ತು ವಿನಾಶಕಾರಕ ದುಷ್ಟ ಶಕ್ತಿಗಳು